ರೂಮಿಗೆ ಹೋಗಿ ಅಡುಗೆ ಮಾಡಿಕೊಳ್ಳುವುದು ಬ್ಯಾಸರ ಅನಿಸಿ ಅಲ್ಲೇ ದಾರಿಯಲ್ಲಿದ್ದ ಎಗ್‌ರೈಸ್ ಅಂಗಡಿಯಲ್ಲಿ ಒಂದು ಫುಲ್ ಎಗ್‌ರೈಸ್ ತಿಂದು ರೂಮು ಸೇರಿದ. ಗ್ಯಾಸು ಶುರು ಮಾಡಿ ಜಳಕಕ್ಕೆಂದು ನೀರು ಕಾಯಿಸಲು ಇಟ್ಟ. ಯಮನೂರಪ್ಪ ಬೆಳಗ್ಗೆ ಕೋರಿಯರ್ ಕಚೇರಿಗೆ ಹೋಗುವಾಗ ಎಂದೂ ಜಳಕ ಮಾಡುತ್ತಿರಲಿಲ್ಲ. ಪ್ರತಿ ದಿನ ಅವನು ರಾತ್ರಿಯೇ ಜಳಕ ಮಾಡುತ್ತಿದ್ದ. ಅದು ಒಂದು ರೀತಿಯಲ್ಲಿ ಅವನಿಗೆ ರೂಢಿಯಾಗಿತ್ತು. ದಿನಚರಿಯಾಗಿತ್ತು. ಬಿಸಿ ನೀರಿನ ಜಳಕ ಮಾಡಿದ ನಂತರ ಮೈ ಹಗುರಗೊಂಡಂತೆನಿಸಿತು. ತಲೆ ಒರೆಸಿದ. ಕೂದಲು ಒಣಗಿದ ನಂತರ ಕೊಬ್ಬರಿ ಎಣ್ಣೆ ಸವರಿಕೊಂಡು ನೀಟಾಗಿ ಬಾಚಿಕೊಂಡ. ಮುಖಕ್ಕೊಂದಿಷ್ಟು ಪೌಡರ್ ಬಳಿದುಕೊಂಡು, ಇಸ್ತ್ರೀ ಮಾಡಿದ ಪ್ಯಾಂಟ್, ಶರ್ಟ್ ಧರಿಸಿ ಟಿಪ್ ಟಾಪಾದ. ಈಗ ಯಾರಾದರೂ ಯಮನೂರಪ್ಪನನ್ನು ನೋಡಿದರೆ ಥೇಟು ಮದುಮಗನಂತೆ ಕಾಣುತ್ತಿದ್ದ. ಆ ಮ್ಯಾಲೆ ಮಂಚದ ಮ್ಯಾಲೆ ಗಾದೆ ಹಾಸಿ, ಗಾದೆ ತುಂಬಾ, ತಂದಿದ್ದ ಮಲ್ಲಿಗೆ ಹೂ ಹರಡಿ ಪ್ರಥಮ ರಾತ್ರಿಗೆ ಗಾದೆ ಸಜ್ಜುಗೊಳಿಸಿದಂತೆ ಸಜ್ಜುಗೊಳಿಸಿದ. ಮುಂಗೈಗೆ ಒಂದಿಷ್ಟು ಮಲ್ಲಿಗೆ ಹೂ ಕಟ್ಟಿಕೊಂಡ. ಟ್ಯೂಬ್‌ಲೈಟ್ ಆರಿಸಿ ಗಾದೆ ಮ್ಯಾಲೆ ಅಂಗಾತವಾದ. ಮುಂಗೈಗೆ ಕಟ್ಟಿಕೊಂಡ ಮಲ್ಲಿಗೆ ಹೂ ಮೂಸಿ ನೋಡಿದ. ಮಲ್ಲಿಗೆ ಘಮಕ್ಕೆ ಆನಂದ ತುಂದಿಲನಾದ. ಕಣ್ಣು ಮುಚ್ಚಿ ಮಲ್ಲಿಗೆಯ ಘಮ ಆಸ್ವಾದಿಸಿಯೇ ಆಸ್ವಾದಿಸಿದ. ಹೀಗೆ ಮಲ್ಲಿಗೆ ಮೂಸುವುದು, ಅದರ ಘಮ ಆಸ್ವಾದಿಸುವುದು ನಡದೇ ಇತ್ತು.

ಯಮನೂರಪ್ಪ ಜಗತ್ತು ಮರೆತ. ಒಂದು ರೀತಿಯ ನಶೆ ಅವನನ್ನು ಆವರಿಸಿದಂತಾಯಿತು. ಮೈ ಮರೆತ. ರೂಮು ನಕ್ಷತ್ರಗಳ ಬೆಳಕಿನಲ್ಲಿ ಪ್ರಜ್ವಲಿಸತೊಡಗಿತು. ಚಂದಿರನ ಮಗಳಂತಹ ಬೆಳ್ಳನೆಯ ಹುಡುಗಿ ಇವನ ರೂಮಿನ ಕದ ತೆರೆದು ಒಳ ಬಂದು ಯಮನೂರಪ್ಪನ ತೆಕ್ಕೆಗೆ ಬಿದ್ದು ತುಟಿ ಮುತ್ತು ಕೊಟ್ಟಳು. ಅವಳ ಮೈ ಘಮ ಥೇಟು ಮಲ್ಲಿಗೆಯ ಘಮದ್ದೇ. ತುಸು ಹೊತ್ತು ತೂಗು ಮಂಚದ ಮ್ಯಾಲೆ ಕುಳಿತು ಹರಟಿದರು. ನಗಾಡಿದರು. ಯಮನೂರಪ್ಪನಂತೂ ಚಂದಿರನ ಮೈ ಬಣ್ಣದ ಅವಳನ್ನು ಇನ್ನಿಲ್ಲದಂತೆ ನೋಡಿ ಕಣ್ತುಂಬಿಕೊಂಡ. ಅವಳು ಚೆಂದ ಭಾವಗೀತೆ ಹಾಡಿದಳು. ಪ್ರತಿಯಾಗಿ ಇವನೂ ಒಂದು ಪ್ರೇಮಗೀತೆ ಹಾಡಿದ. ಇದರ ನಡುವೆ ಸಾಕಷ್ಟು ಸಲ ತುಟಿಮುತ್ತುಗಳು ಅದಲು ಬದಲಾಗಿದ್ದವು. ಇನ್ನು ಮಾತು, ಹಾಡು ಸಾಕೆನಿಸಿ ಮಂಚದ ಮ್ಯಾಲೆ ತಬ್ಬಿಕೊಂಡು ಮಲಗಿದರು. ಯಮನೂರಪ್ಪನಿಗೆ ಫಕ್ಕನೆ ಎಚ್ಚರವಾಯ್ತು. ಆಗಲೇ ಬೆಳಕು ಹರಿದಿತ್ತು. ಯಮನೂರಪ್ಪನ ತುಟಿಯಲಿ ಮಂದಸ್ಮಿತ ಲಾಸ್ಯವಾಡಿತು.

★★★

ಇವತ್ತು ರವಿವಾರವಾದ್ದರಿಂದ ಯಮನೂರಪ್ಪನಿಗೆ ರಜೆ ಇತ್ತು. ಇಡೀ ದಿನ ರೂಮಿನಲ್ಲಿ ಸುಮ್ಮನೇ ಕಾಲಹರಣ ಮಾಡುವುದು ಅವನಿಂದಾಗುವುದಿಲ್ಲ. ಹೋದರೆ ಪಿಕ್ಚರ್‌ಗೆ ಹೋಗಬೇಕು. ಇಲ್ಲವಾದರೆ ರೂಮಿನಲ್ಲಿ ಮಲಗಬೇಕು. ಇದ್ಯಾವುದೂ ಬೇಡವೆಂದು ನಿಶ್ಚಯಿಸಿದ ಯಮನೂರಪ್ಪ ತಮ್ಮೂರು ನವಲಗುಂದಕ್ಕೆ ಹೋಗುವುದೇ ವಾಸಿ ಎಂದುಕೊಂಡ. ಬೈಕ್ ಮೇಲೆ ಹುಬ್ಬಳ್ಳಿಯಿಂದ ತಾಸೊಪ್ಪತ್ತಿನ ದಾರಿ ನವಲಗುಂದ. ಊರಿಗೆ ಹೋಗದೆ ಆಗಲೇ ತಿಂಗಳಾಗಿತ್ತು. ಅದ್ಯಾಕೋ ಅಪ್ಪ ಅವ್ವನ ಮುಖ ನೋಡಬೇಕೆನಿಸಿ, ಮುಖ ತೊಳೆದುಕೊಂಡು ಸೀದಾ ಬೈಕ್ ಶುರು ಮಾಡಿ ನವಲಗುಂದದ ರಸ್ತೆ ಹಿಡಿದ.

ಹುಬ್ಬಳ್ಳಿ ಆಗಲೇ ಅಷ್ಟು ದೂರ ಹಿಂದುಳಿಯಿತು. ಬೆಳಗಿನ ಹೊತ್ತಾದ್ದರಿಂದ ಆಹ್ಲಾದಕರ ತಂಗಾಳಿ ಯಮನೂರಪ್ಪನ ಮೈ ಸೋಕಿ ಖುಷಿ ಕೊಡುತ್ತಿತ್ತು. ಖಾಲಿ ಖಾಲಿ ಇದ್ದ ರಸ್ತೆ